# ಬೇಸಿಗೆ ಮಳೆ

■ ವೆಂಕಟೇಶ ಚಾಗಿ
ಕಲೆ: ಸಂತೋಷ್ ಸಸಿಹಿತ್ಲು



ಗುಡುಗುಡು ಗುಡುಗಿತು ಆಗಸದಲ್ಲಿ
ಪಳ್ಳನೆ ಮೂಡಿತು
ಮಿಂಚಿನ ಬಳ್ಳಿ
ಮೋಡವು ನೀಡಿತು
ಮೊದಲ ಮಳೆ
ಸಂತಸ ಗೊಂಡಿತು
ದಣಿದ ಇಳೆ

ರಪರಪ ಸುರಿಯಿತು
ಮಳೆಹನಿ ನೀರು
ಹಸಿರಿಗೆ ಆಯಿತು
ಹಬ್ಬದ ಖೀರು
ಮರವು ಕುಣಿಯಿತು
ಹನಿಹನಿ ಚೆಲ್ಲಿ
ಹಕ್ಕಿಗೆ ಹೇಳಿತು
ಗೂಡಲಿ ನಿಲ್ಲಿ

ಗಾಳಿಯು ಓಡಿತು
ದಿಕ್ಕನು ಕಾಣದೆ
ಗಡಗಡ ನಡುಗಿತು
ನೋಡಲು ನನ್ನೆದೆ
ಬಳಬಳ ಬಿದ್ದವು
ತಣ್ಣನೆ ಆಣಿಕಲ್ಲು
ಬಾಯಲಿ ಇಡಲು
ನಡುಗಿತು ಹಲ್ಲು

ಸಂಭ್ರಮ ಮೂಡಿತು
ಬೇಸಿಗೆ ಮಳೆಗೆ
ಕೋಗಿಲೆ ಧ್ವನಿಸಿತು
ಮೊದಲ ಹಾಡಿಗೆ
ವಟವಟ ನುಡಿಯಿತು
ಕೆರೆಯೊಳು ಕಪ್ಪೆ
ಖುಷಿಯನು ಪಡದಿರೆ
ನಮ್ಮದೆ ತಪ್ಪೆ ■

## ಕುಂಚ ಪ್ರಪಂಚ



ಯೋಜನ್ ವೀರೇಶ್
ಜೆ.ಎಸ್.ಎಸ್. ಪಬ್ಲಿಕ್ ಶಾಲೆ, ಬೆಂಗಳೂರು







ಸ್ತುತಿ ಚಿಂಚೇವಾಡಿ
2ನೇ ತರಗತಿ,
ಶ್ರೀ ಕುಮಾರನ್ ಚಿಲ್ಡ್ರನ್ ಹೋಂ, ಬೆಂಗಳೂರು

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in